**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ:ಸಿ5(1) ವರ್ಗ 1/2013–14 ದಿನಾಂಕ:24–6–2013

## ಜ್ಞಾಪನ

ವಿಷಯ: ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಗಳು

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/22/ಸೇನೌವ 2013 ಬೆಂಗಳೂರು ದಿನಾಂಕ:7–6–2013

2. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿ:13–6–2013
3. ದಿನಾಂಕ:20–6–2013ರಂದು ಜಿಲ್ಲಾ ಉಪನಿರ್ದೇಶಕರ ಕಛೇರಿ ಜಂಟಿ ನಿರ್ದೇಶಕರ ಕಛೇರಿ ಅಧೀಕ್ಷಕರ ಸಭೆಯಲ್ಲಿ ಚರ್ಚಿಸಿದಂತೆ.

2013–14ನೇ ಸಾಲಿನ ಬೋಧಕೇತರ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ವರ್ಗಾವಣೆಯನ್ನು ಕೌನ್ಸಿಲಿಂಗ್ ಮುಖೇನ ನಿರ್ವಹಿಸಲು ಈಗಾಗಲೇ ಉಲ್ಲೇಖ(1)ರ ಸರ್ಕಾರದ ಆದೇಶದ ಅಡಿಯಲ್ಲಿ ಉಲ್ಲೇಖ(2)ರಂತೆ ಈ ಕಛೇರಿಯಿಂದ ಸುತ್ತೋಲೆಯನ್ನು ನೀಡಲಾಗಿದೆ.

ದಿನಾಂಕ:20–6–2013ರಂದು ಜಂಟಿ ನಿರ್ದೇಶಕರ ಕಛೇರಿ ಹಾಗೂ ಉಪನಿರ್ದೇಶಕರ ಕಛೇರಿಗಳ ಅಧೀಕ್ಷಕರ ಸಭೆಯಲ್ಲಿ ವರ್ಗಾವಣೆ ಸಭೆಯಲ್ಲಿ ಸ್ಪಷ್ಟೀಕರಣ ಕೇಳಿದ್ದು, ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

1. ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮುಖೇನ ಶೇ.75 ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಶೇಕಡಾ 25ರಷ್ಟು ವರ್ಗಾವಣೆಗೆ ಪರಿಗಣಿಸಲು ತಿಳಿಸಲಾಗಿತ್ತು. ಪ್ರಸ್ತುತ ಕೌನ್ಸಿಲಿಂಗ್ ಶೇ 50, ಪರಸ್ಪರ ಶೇ 25, ಸಾರ್ವಜನಿಕ ಹಿತದೃಷ್ಟಿಯಿಂದ ಶೇ 25 ರಷ್ಟು ವರ್ಗಾವಣೆ ಮಾಡಲು ತಿಳಿಸಿದೆ.
2. ಪರಸ್ಪರ ವರ್ಗಾವಣೆಯಲ್ಲಿ ಆದ್ಯತೆಯನ್ನು ಪರಿಗಣಿಸಲು ಗ್ರಾಮೀಣ [ಗ್ರಾಮೀಣದಿಂದ ಗ್ರಾಮೀಣ] ತದನಂತರ ಬೇರೆ ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಆ ನಂತರ ಸ್ಥಳೀಯ ಬದಲಾವಣೆಗೆ ಆದ್ಯತೆ ನೀಡುವುದು.
3. ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಲಾದ ವರ್ಗಾವಣೆಯಲ್ಲಿ ಆದ್ಯತೆಯನ್ನು ದೂರು ಪ್ರಕರಣಗಳಿಗೆ ತದನಂತರ ಒಂದೇ ಕಛೇರಿ / ಶಾಲೆಯಲ್ಲಿ ದೀರ್ಘ ಕಾಲದಿಂದ ಇರುವ ಪ್ರಕರಣಗಳನ್ನು ಪರಿಗಣಿಸುವುದು.
4. ಆಯಾ ಕೇಡರ್‌ನಲ್ಲಿ ಕನಿಷ್ಟ ಪ್ರಮಾಣದಲ್ಲಿ ವರ್ಗಾವಣೆ ಮಾಡಲು ನಿಗದಿತ ವೃಂದಬಲ ಇಲ್ಲದೇ ಇದ್ದಲ್ಲಿ ಆಯಾ ಜಿಲ್ಲೆ / ವಿಭಾಗ ಮಟ್ಟದಲ್ಲಿ ಗರಿಷ್ಟ ಓರ್ವ ಸಿಬ್ಬಂದಿಯನ್ನು ಮಾತ್ರ ವರ್ಗಾಯಿಸಲು ಕ್ರಮ ವಹಿಸುವುದು.

ಬೆಂಗಳೂರು ಆಯುಕ್ತಾಲಯ ಮಟ್ಟದ ಕೌನ್ಸಿಲಿಂಗನ್ನು ದಿನಾಂಕ:29–6–2013ರಂದು ಬೆಳಿಗ್ಗೆ 9–00 ಗಂಟೆಗೆ ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ. ಈ ಕಾರಣ ಅಂತಿಮ ಆದ್ಯತಾ ಪಟ್ಟಿಯಂತೆ ಅಭ್ಯರ್ಥಿಗಳು ಹಾಜರಿದ್ದು, ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ:29.6.2013ರಂದು ಮಧ್ಯಾಹ್ನ 2–30ಕ್ಕೆ ಶಿಕ್ಷಕರ ಸದನ, ಕೆ.ಜಿ.ರಸ್ತೆ, ಬೆಂಗಳೂರು ಇಲ್ಲಿ ಹಾಜರಾಗಲು ತಿಳಿಸಿದೆ.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

24/6/13

[ಕೆ.ಪಿ.ಹನುಮಂತರಾಯಪ್ಪ]
ಅಪರ ಆಯುಕ್ತರು[ಆಡಳಿತ] [ಹೆ.ಪ್ರ]

ಇವರಿಗೆ:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ ಆಯುಕ್ತಾಲಯ
2. ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
3. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಗೆ ಬರುವ ಎಲ್ಲಾ ನಿರ್ದೇಶಕರುಗಳು.
4. ಸಹ ನಿರ್ದೇಶಕರು , ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು
5. ಪ್ರಾಂಶುಪಾಲರು,ಶಿಕ್ಷಕರ ಶಿಕ್ಷಣ ಮಹಾವಿಧ್ಯಾಲಯ, [ಸಿ.ಟಿ.ಇ]ಮೈಸೂರು, ಮಂಗಳೂರು, ಚಿತ್ರದುರ್ಗ
6. ಸಹನಿರ್ದೇಶಕರು, ಬೆಂಗಳೂರು ಹಾಗೂ ಮೈಸೂರು ವಿಭಾಗ
7. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಉಪನಿರ್ದೇಶಕರು[ಆಡಳಿತ] ಹಾಗೂ [ಅಭಿವೃದ್ಧಿ]
8. ಸಹ ನಿರ್ದೇಶಕರು ಶಿಕ್ಷಕರ ಕಲ್ಯಾಣ ನಿಧಿ ಹಾಗೂ ವಿಧ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಬೆಂಗಳೂರು
9. ಆಯುಕ್ತರ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಹಾಗೂ ಅಧೀಕ್ಷಕರ ಮಾಹಿತಿಗಾಗಿ